# ಸೂರ್ಯನ ಕುದುರೆಯ ಬೆನ್ನು ಹತ್ತಿ..

**ಸೂರ್ಯನಿಗೆ ನಮಸ್ಕಾರ ಮಾಡುತ್ತಿರುವಂತೆ ಕಾಣಿಸುವ ಈ ಕೀಟ ಚಿಕ್ಕ ಮಕ್ಕಳಿಗಂತೂ ಅದ್ಭುತ ಸಂಗತಿ.**

■ ಚಿತ್ರ ಬರಹ:
**ಹರೀಶ್ ಹಳೆಮನೆ**


ಮೊಟ್ಟೆ ಇಡುತ್ತಿರುವ ಸೂರ್ಯನ ಕುದುರೆ

ಪ್ರಾರ್ಥಿಸುವಂತೆ ಕಾಣಿಸುವ ಈ ಕೀಟವನ್ನು 'ಸೂರ್ಯನ ಕುದುರೆ'ಯೆಂದೂ ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ಪ್ರೇಯಿಂಗ್ ಮ್ಯಾಂಟಿಸ್' ಎಂಬ ಹೆಸರಿದೆ. ಪ್ರಾರ್ಥನೆ ಮಾಡುತ್ತಿರುವಂತೆ ಕಂಡರೂ ಇದು ಸಾಧು ಕೀಟವೇನಲ್ಲ. ಚಿಕ್ಕಪುಟ್ಟ ಕೀಟಗಳು, ಹಾತೆಗಳು, ಚಿಟ್ಟೆಗಳನ್ನು ಹಿಡಿದು ತಿನ್ನುವ ಸ್ವಭಾವ ಇದಕ್ಕಿದೆ. ಇಲ್ಲಿದೆ ಸೂರ್ಯನ ಕುದುರೆಯ ಜತೆಗೆ ನನ್ನ ಛಾಯಾಗ್ರಹಣದ ಅನುಭವ.

ಹೌದು! ಮನೆಯ ಬಳಿಯಿದ್ದ ಆ ಗಿಡದಲ್ಲಿ ತಿಂಗಳ ಹಿಂದೆಯಷ್ಟೇ ಚಿಕ್ಕದಾದ ಗೂಡೊಂದನ್ನು ನೋಡಿದ್ದೆ. ಯಾವುದೋ ಚಿಟ್ಟೆಯ ಗೂಡಾಗಿರಬಹುದು ಅಂದುಕೊಂಡಿದ್ದೆ. ಅವತ್ತು ನೋಡುತ್ತೇನೆ– ನಸು ಹಳದಿ ಬಿಳಿ ಬಣ್ಣದ ಚಿಕ್ಕ ಚಿಕ್ಕ ಸೂರ್ಯನ ಕುದುರೆಗಳು ಅದರಿಂದ ಹೊರಬರುತ್ತಾ ಇವೆ! ಸೂರ್ಯನ ಕುದುರೆ ಅಥವಾ ಪ್ರೇಯಿಂಗ್ ಮ್ಯಾಂಟಿಸ್ ನಮ್ಮ ಪರಿಸರದಲ್ಲಿ ಕಾಣಲು



ಸಿಗುವ ಒಂದು ವಿಚಿತ್ರ ಜೀವಿ. ಸೂರ್ಯನಿಗೆ ನಮಸ್ಕಾರ ಮಾಡುತ್ತಿರುವಂತೆ ಕಾಣಿಸುವ ಈ ಕೀಟ ಚಿಕ್ಕ ಮಕ್ಕಳಿಗಂತೂ ಅದ್ಭುತ ಸಂಗತಿ. ಚಿಟ್ಟೆ ಮುಂತಾದ ಇತರ ಚಿಕ್ಕಪುಟ್ಟ ಜೀವಿಗಳನ್ನು ಹಿಡಿದು ತಿನ್ನುವಾಗ ಇದರ ಕ್ರೂರ ಮುಖದ ದರ್ಶನವೂ ಆಗುತ್ತದೆ.

ಈ ಚಿತ್ರಗಳಲ್ಲಿ ಕಾಣಿಸುತ್ತಿರುವ ಕೋಶ ಸೂರ್ಯನ ಕುದುರೆಯದ್ದು. ಅದನ್ನು ಇಂಗ್ಲಿಷ್‌ನಲ್ಲಿ 'ಊಥೆಕಾ' ಎಂದು ಕರೆಯುತ್ತಾರೆ. ಈ ಕೋಶದಿಂದ ತಪತಪನೆ ಮರಿ ಕುದುರೆಗಳು ಉದುರುತ್ತಿದ್ದವು. ಒಂದೇ ಕೋಶದಿಂದ ನೂರಾರು ಚಿಕ್ಕ ಚಿಕ್ಕ ಮರಿಗಳು! ಆದರೆ ಪ್ರಕೃತಿಯ ವೈಚಿತ್ರ್ಯ ನೋಡಿ. ಇವು


ಕೋಶದ ಮೇಲೆ ಮರಿ



ಗಳಲ್ಲಿ ಕೆಲವೇ ಕೆಲವಕ್ಕೆ ಮಾತ್ರ ಜೀವವಿದ್ದದ್ದು! ಹೆಚ್ಚಿನವು ನಿರ್ಜೀವವಾಗಿ ಉದುರುತ್ತಿದ್ದವು. ನಿರ್ಜೀವವಾಗಿ ಉದುರಿದ ಮ್ಯಾಂಟಿಸ್ ಮರಿಗಳನ್ನು ಇರುವೆಗಳು ಕೊಂಡೊಯ್ದು ತಿನ್ನುತ್ತಿದ್ದವು! ಜೀವವಿದ್ದ ಮರಿಗಳನ್ನೂ ಇವು ಬಿಡುತ್ತಿರಲಿಲ್ಲ. ಕೊಸರಾಡಿಕೊಂಡು ಹೋಗುವ ಮರಿಗಳು ಮಾತ್ರ ಹೊಸ ಜೀವನಕ್ಕೆ ತೆರೆದುಕೊಳ್ಳುತ್ತಿದ್ದ ದೃಶ್ಯ ಡಾರ್ವಿನ್ ಹೇಳಿದ 'ಸರ್ವೈವಲ್ ಆಫ್ ದ ಫಿಟ್ಟೆಸ್ಟ್' ಥಿಯರಿಯನ್ನು ನೆನಪಿಗೆ ತಂದಿತು. ಇರುವೆಗಳಿಂದ ತಪ್ಪಿಸಿಕೊಂಡು ಹೋದ ಮರಿಗಳು ಎಲೆಗಳ ಕೆಳಭಾಗದಲ್ಲಿ ತಲೆಕೆಳಗಾಗಿ ನಿಧಾನವಾಗಿ ಸಂಚರಿಸುತ್ತವೆ.

ಈ ಚಿತ್ರಗಳನ್ನು ತೆಗೆದು ಬಹಳ ದಿನಗಳಾಗಿರಲಿಲ್ಲ. ಇನ್ನೊಂದು ಸೂರ್ಯನ ಕುದುರೆ ಮೊಟ್ಟೆ (ಕೋಶ) ಇಡುತ್ತಿದ್ದ ದೃಶ್ಯವೂ ನನ್ನ ಕಣ್ಣಿಗೆ ಕಾಣಿಸಿತು. ಸರಿ, ಕೋಶ ಒಡೆದು ಮರಿ ಹೊರಟ ಚಿತ್ರಗಳು ಹೇಗೂ ಸಿಕ್ಕಿವೆ, ಮೊಟ್ಟೆ ಇಡುವ ಚಿತ್ರವೂ ಇರಲಿ ಎಂದು ಕ್ಯಾಮೆರಾ ಕ್ಲಿಕ್ಕಿಸಿದೆ. ಒಂದೇ ಕೋಶದೊಳಗೆ ನೂರಾರು ಮೊಟ್ಟೆಗಳು! ಹೆಚ್ಚಾಗಿ ಗಿಡಗಳ ರೆಂಬೆಯಲ್ಲೋ, ಹುಲ್ಲಿನಲ್ಲೋ ಇಂತಹ ಕೋಶಗಳನ್ನು ಕಾಣಬಹುದಾದರೂ ಆ ದಿನ ನಾನು ಕಂಡಿದ್ದು ನೆಲದ ಮೇಲೆ ಮೊಟ್ಟೆ ಇಡುವ ಸೂರ್ಯನ ಕುದುರೆಯನ್ನು. ಇದು ಕೂಡಾ ಅಚ್ಚರಿಯ ವಿಷಯವೇ.